**ಮನುಷ್ಯರಾಗಿ ನಾವೆಲ್ಲರೂ ಅತಿ ಹೆಚ್ಚು ಭಯ ಪಡುವುದು ಅನಾಮಿಕತೆಗೆ, ಅಪರಿಚಿತತೆಗೆ... ಹೆಣ್ಣಿನ ವ್ಯಕ್ತಿತ್ವ ವಿಕಸನದ ದೃಷ್ಟಿಯಿಂದ ಇದು ಎಷ್ಟು ಮುಖ್ಯ ವಿಚಾರ ಎಂಬುದು ನಿಮಗೆ ಬಿಡಿಸಿ ಹೇಳಬೇಕಾಗಿಲ್ಲ. ಈ Identity crises ಕೇವಲ ವೈಯಕ್ತಿಕವಾದುದಲ್ಲ. ಎಲ್ಲಾ ರೀತಿಯಿಂದಲೂ ಬಿಕ್ಕಟ್ಟು ಎದುರಿಸುತ್ತಿರುವ ನಮ್ಮಂತಹ ಯುದ್ಧಪೀಡಿತ ದೇಶಗಳಲ್ಲಿ ಇದು ಸಾಮುದಾಯಿಕ ಹೊಣೆಗಾರಿಕೆಯ ಭಾವವಾಗಿಯೂ ಬಲಿಯಬಹುದು.**

## ಅಫ್ನಾನ್ ಜೊಲಾನಿ ಸಂದರ್ಶನ

◆ **ನಿಮ್ಮ ಬಾಲ್ಯದ ಕೌಟುಂಬಿಕ ಪರಿಸರ, ವಿದ್ಯಾಭ್ಯಾಸದ ದಿನಗಳು ಮತ್ತು ವೈವಾಹಿಕ ಜೀವನದ ಕುರಿತು ನೆನಪುಗಳನ್ನು ಹಂಚಿಕೊಳ್ಳಿ...**

ಪ್ಯಾಲೆಸ್ತೀನ್‌ನ ಜೆರುಸಲೆಮ್‌ನಲ್ಲಿ ವಾಸವಾಗಿರುವ ನಾನು ಎರಡು ವರ್ಷದವಳಾಗಿದ್ದಾಗಲೇ ನನ್ನ ಸುತ್ತಮುತ್ತಲಿನ ಪಾತ್ರಗಳನ್ನಿಟ್ಟುಕೊಂಡು ನನ್ನದೇ ಆದ ಕಲ್ಪನೆಯ ಕಥೆಗಳನ್ನ ಹುಟ್ಟಿಸಿಕೊಂಡು ಹೇಳುತ್ತಿದ್ದೆ. 'ನಮ್ಮ ಅಫ್ನಾನ್ ದೊಡ್ಡವಳಾದ ಮೇಲೆ ಸಾಹಿತ್ಯ ಕ್ಷೇತ್ರದಲ್ಲಿ ಮಹತ್ವದ್ದೇನಾದರೂ ಮಾಡುತ್ತಾಳೆ' ಅಂತ ಆಗ ನನ್ನಪ್ಪ ಹೇಳುತ್ತಿದ್ದರು. ನಂತರ ನಾನು ಸಿಕ್ಕಿದ್ದನ್ನೆಲ್ಲಾ ಓದುವುದನ್ನು ರೂಢಿಸಿಕೊಂಡೆ. ರಷಿಯನ್ ಸಾಹಿತ್ಯ ಕೃತಿಗಳನ್ನು ನಾನಾಗ ಹೆಚ್ಚು ಇಷ್ಟಪಡುತ್ತಿದ್ದೆ. ಅಪ್ಪನ ಪುಸ್ತಕ ಸಂಗ್ರಹವೂ ದೊಡ್ಡದಿತ್ತು. ಒಂದ್ಸಲ, 'ನೀನ್ಯಾಕೆ ಅರಬ್ ಪುಸ್ತಕಗಳನ್ನು ಓದೋದೆ ಇಲ್ಲ' ಅಂತ ಅಪ್ಪ ಕೇಳಿದ. ಮತ್ತೆ ಪುಸ್ತಕದಂಗಡಿಗೆ ಕರೆದೊಯ್ದು ಖ್ಯಾತ ಲೇಖಕಿ ಹ್ಯನ್ನಾ ಮಿನಾ ಬರೆದ 'The Sun on a Cloudy Day' ಎಂಬ ಕಾದಂಬರಿ ಕೊಡಿಸಿದ. ಓದೋದು ಮತ್ತು ಬರೆಯುವುದೆಂದರೆ ನನಗೆ ಬಹಳ ಇಷ್ಟ ಅನ್ನೋದನ್ನ ಅಪ್ಪ ಗಮನಿಸಿದ್ದ. ಆತನಿಗೂ ಓದು ಬರಹದ ಆಸಕ್ತಿ ಇತ್ತಾದ್ದರಿಂದ ನನಗೂ ಸದಾ ಬೆಂಬಲಿಸುತ್ತಿದ್ದ. 11 ವರ್ಷ ವಯಸ್ಸಾದಾಗ ನಾನು ಚಿತ್ರಗಳನ್ನು ಬರೆಯಲು ಶುರು ಮಾಡಿದೆ, ಮತ್ತೆ ನಾನು ಬರೆದ ಚಿತ್ರಗಳು ಮುಂದಿನ ಐದು ವರ್ಷಗಳ ಕಾಲ 'Al-Quds' ದಿನಪತ್ರಿಕೆಯ ಸಾಹಿತ್ಯ ಪುಟದಲ್ಲಿ ಪ್ರತಿ ಶುಕ್ರವಾರ ಪ್ರಕಟಗೊಳ್ಳುತ್ತಿದ್ದವು.

ಶಾಲೆಯಲ್ಲಿ ಅರೇಬಿಕ್ ಭಾಷೆಯ ಮೇಷ್ಟ್ರು, ನಾನು ಬರೆದ ಕವಿತೆಗಳನ್ನ, ಚಿತ್ರಗಳನ್ನ ತರಗತಿಯಲ್ಲಿ ಎಲ್ಲರೆದುರು ಓದಿಸಿ ನನ್ನ ಬೆನ್ನು ತಟ್ಟುತ್ತಿದ್ದರು. ಕವನ ವಾಚನ, ನಾಟಕಾಭಿನಯ, ಭಾಷಣ ಕಲೆ ಮತ್ತು ಇನ್ನಿತರ ಸೃಜನಶೀಲ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದ ನಾನು ಶಾಲೆಯಲ್ಲಿ ಸ್ಟಾರ್ ಸ್ಟೂಡೆಂಟ್ ಆಗಿದ್ದೆ. ನನ್ನನ್ನು ಶಾಲೆಯ ಕವಿಯೆಂದು ಕರೆಯುತ್ತಿದ್ದರು. ನಾನು ಬರೆಯುವುದನ್ನು ಮುಂದುವರಿಸಿದೆ. ಆದರೆ ಬರೆದದ್ದನ್ನು ಪ್ರಕಟಿಸಲು ಹೋಗಲಿಲ್ಲ. ಮದುವೆಯಾದ ಮೇಲೆ ವಿದ್ಯಾಭ್ಯಾಸ ಮುಗೀತು. ಇಂಗ್ಲಿಷ್, ಫ್ರೆಂಚ್ ಮತ್ತು ಅರೇಬಿಕ್ ಭಾಷೆಗಳ ಉಗಮ ಮತ್ತು ಸಾಹಿತ್ಯ ಪರಂಪರೆಯನ್ನು ಅಧ್ಯಯನ ಮಾಡಿದೆ. 'It was Mine' ಎಂಬುದು ನನ್ನ ಮೊದಲ ಪ್ರಕಟಿತ ಕಾದಂಬರಿ. ನಂತರ 'Soul Mate' ಎಂಬ ನನ್ನ ಕವನ ಸಂಕಲನ ಬಂತು. ಗಂಡ ಮತ್ತು ಮಕ್ಕಳ ಪ್ರೀತಿ-ಪ್ರೋತ್ಸಾಹ ಸದಾ ನನ್ನ ಬೆನ್ನಿಗಿದೆ.

◆ **ಊಳಿಗಮಾನ್ಯ ಮೌಲ್ಯಗಳಿರುವ ಏಷ್ಯಾ, ಆಫ್ರಿಕಾ ಹಾಗೂ ಅರಬ್ ದೇಶಗಳಲ್ಲಿ ಪುರುಷ ಪ್ರಧಾನ ಸಮಾಜ ಅತ್ಯಂತ ಪ್ರಭಾವಶಾಲಿ. ಹಾಗೆ ನೋಡಿದರೆ ಅರಬ್‌ನಲ್ಲಿ ಬಹುಪತ್ನಿತ್ವ ಈಗಲೂ ಚಾಲ್ತಿಯಲ್ಲಿದೆ. ಒಬ್ಬ ಆಧುನಿಕ ಕಾಲದ ಶಿಕ್ಷಿತ ಹಾಗೂ ಸಂವೇದನಾಶೀಲ ಕವಯಿತ್ರಿಯಾಗಿ ಇದಕ್ಕೆ**